C.C- 611/2025

ಡಿ. ಡಬ್ಲೂ - 1

ಸಾಕ್ಷಿಯನ್ನು ದಿಃ 09.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಾದ ಶ್ರೀ. ಎನ್.ಜಿ.ಕೆ ರವರಿಂದಃ**

**1.** ಸಾಗರ ಫೈನಾನ್ಸ್ ಹಣಕಾಸು ಮಾಡುವ ಸಂಸ್ಥೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರವಿ ಕುಮಾರ್ ಎಂದರೆ ನನ್ನ ಭಾವ. ಸದರಿ ರವಿ ಕುಮಾರ್ ರವರು ಸಾಗರ ಫೈನಾನ್ಸ್ ಗೆ ಸಾಲವನ್ನು ಮರು ಪಾವತಿ ಮಾಡಿದ್ದಾರೆ. ಸದರಿ ಸಾಲದ ಭದ್ರತೆಗಾಗಿ ನನ್ನ ಭಾವ ರವಿ ಕುಮಾರ್ ರವರ ಪರವಾಗಿ ಒಂದು ಚೆಕ್ ಅನ್ನು ನಾನು ಸಾಗರ ಫೈನಾನ್ಸ್ ಗೆ 2022 ಅಕ್ಟೋಬರ್ ನಲ್ಲಿ ಕೊಟ್ಟಿದ್ದೆ. ಸಾಲ ತೀರುವಳಿಯಾದ ನಂತರ ನನ್ನ ಚೆಕ್ ಅನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಇನ್ನೂ 5,000/- ಕೊಡುವುದು ಬಾಕಿ ಇದೆ ಎಂದು ಸಾಗರ ಫೈನಾನ್ಸ್‌ರವರು ಹೇಳಿದ್ದು, ಆ ಹಣವನ್ನು ನಾವು ಕಟ್ಟುವುದಿಲ್ಲ ಬಿಟ್ಟು ಕೊಡಿ ಎಂದು ಕೇಳಿದ್ದೇವೆ. ಈ ಸಂಬಂಧ ನಾನು ದೂರನ್ನು ಕೊಡಲು ಯಾವುದೇ ಸಮಸ್ಯೆ ಇರಲಿಲ್ಲ. ಚೆಕ್ ಅನ್ನು ನಗದೀಕರಣಗೊಳಿಸದಂತೆ ಬ್ಯಾಂಕಿಗೆ ನಾನು ಅರ್ಜಿಯನ್ನು ಕೊಟ್ಟಿಲ್ಲ. ಸಾಗರ ಫೈನಾನ್ಸ್ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**2.** ನಾನು ಫಿರ್ಯಾದಿಯಿಂದ 1,50,000/- ರೂ. ಸಾಲವನ್ನು ಪಡೆದಿದ್ದು, ಆ ಹಣದ ತೀರುವಳಿಗಾಗಿ ನಿಪಿ-1 ರ ಚೆಕ್ ಅನ್ನು ಫಿರ್ಯಾದಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಗೆ

ಹಣ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನಿಪಿ–1 ರ ಚೆಕ್ ಅನ್ನು ಸಾಗರ ಫೈನಾನ್ಸ್ ಗೆ ನನ್ನ ಭಾವ ರವಿ ಕುಮಾರ್ ರವರು ಪಡೆದ 50 ಸಾವಿರ ರೂ. ಸಾಲದ ಭದ್ರತೆಗಾಗಿ ನೀಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಗೆ ನಿಪಿ–1 ರಲ್ಲಿ ಕಾಣಿಸಿರುವ ಹಣವನ್ನು ಕೊಡಲು ಬಾಧ್ಯಸ್ಥನು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.